# ಕರ್ನಾಟಕ ವಿಧಾನಪರಿಷತ್ತು

## ನೂರ ನಲವತ್ತ ಮೂರನೆಯ ಅಧಿವೇಶನದ ಮುಂದುವರೆದ ಉಪವೇಶನ

## ಚುಕ್ಕೆ ರಹಿತ ಪ್ರಶ್ನೆ

ದಿನಾಂಕ : 26-03-2021 ಪ್ರಶ್ನೆ ಸಂಖ್ಯೆ : 1925(2217)

ಸದಸ್ಯರ ಹೆಸರು ಮತ್ತು ಕ್ಷೇತ್ರ : ಶ್ರೀ ಪುಟ್ಟಣ್ಣ(ಶಿಕ್ಷಕರ ಕ್ಷೇತ್ರ)

ಉತ್ತರ ನೀಡಬೇಕಾದ ದಿನಾಂಕ : 26-03-2021

ಉತ್ತರಿಸುವ ಸಚಿವರು: ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಸಚಿವರು

ವಿಷಯ : ಹಂಸಧ್ವನಿ ಕಿವುಡ ಮಕ್ಕಳ ಶಾಲೆಯಲ್ಲಿನ ಶಿಕ್ಷಕರಿಗೆ ವೃಂದ ಮತ್ತು ನೇಮಕಾತಿ ನಿಯಮ ರಚಿಸುವ ಬಗ್ಗೆ

(ಅ) ಮಹಿಳೆಯರ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಹಂಸಧ್ವನಿ ಕಿವುಡ ಮಕ್ಕಳ ಶಾಲೆಯನ್ನು ಸರ್ಕಾರವು ದಿನಾಂಕ : 23-07-2016ರ ಆದೇಶ ಸಂಖ್ಯೆ : ಮಮಇ 389 ಪಿಹೆಚ್‌ಪಿ 2014 ರಲ್ಲಿ ವಶಕ್ಕೆ ಪಡೆದು, ವಸತಿ ಶಾಲೆಯನ್ನಾಗಿ ಮಾರ್ಪಡಿಸಿದ್ದು, ಸದರಿ ಶಾಲೆಗೆ 20 ಹುದ್ದೆಗಳನ್ನು ದಿನಾಂಕ : 28-03-1988 ರಲ್ಲಿ ಮಂಜೂರು ಮಾಡಿರುವುದು ನಿಜವೇ;

(ಆ) ಆರ್ಥಿಕ ಇಲಾಖೆಯು ದಿ: 17-07-2019 ರಲ್ಲಿ ಸಿಬ್ಬಂದಿಗಳನ್ನು ಇಲಾಖೆಯ ವೃಂದ ಮತ್ತು ನಿಯಮಗಳಲ್ಲಿ ವಿಲೀನಗೊಳಿಸಲು ಸಹಮತಿ ನೀಡಿ ಮಾನ್ಯ ಸಚಿವರು ಭರವಸೆ ಸಂಖ್ಯೆ : ಮಮಇ 30 ಪಿಹೆಚ್‌ಪಿ 2021 ರಲ್ಲಿ 3 ತಿಂಗಳಲ್ಲಿ ಸದರಿ ಶಾಲೆಯ ಸಿಬ್ಬಂದಿಗಳನ್ನು ವಿಶೇಷ ವಿಲೀನಾತಿ ನಿಯಮಗಳನ್ನು ರೂಪಿಸಿ, ಇಲಾಖೆಯಲ್ಲಿ ವಿಲೀನಗೊಳಿಸಿರುವುದಾಗಿ ಸದನದಲ್ಲಿ ಭರವಸೆ ನೀಡಲಾಗಿದೆಯೇ;

(ಇ) ಮಾನ್ಯ ಸಚಿವರ ಭರವಸೆಯಂತೆ ಇಲಾಖೆಯು ಸದರಿ ಸಿಬ್ಬಂದಿಗಳಿಗೆ ಜ್ಯೇಷ್ಠತೆಯನ್ನು ನಿಗದಿಪಡಿಸಲಾಗಿದೆಯೇ; (ವಿವರಗಳನ್ನು ಒದಗಿಸುವುದು)

(ಈ) ಜ್ಯೇಷ್ಠತೆಯನ್ನು ಇಲಾಖೆಯ ಅಧಿಕಾರಿಗಳ ನಿರ್ಲಕ್ಷ್ಯತೆಯಿಂದ ನಿಗದಿಗೊಳಿಸದಿದ್ದಲ್ಲಿ, ಯಾವ ಕಾಲಮಿತಿಯೊಳಗೆ ಜ್ಯೇಷ್ಠತೆಯನ್ನು ನಿಗದಿಪಡಿಸಲಾಗುವುದು? (ನಿರ್ದಿಷ್ಟ ಸಮಯವನ್ನು ತಿಳಿಸುವುದು)